ಘೋಷಿಸಿದ್ದೇನೆ. ನಾನು ಎಲ್ಲಾ ಸಹಕಾರಿ ಬ್ಯಾಂಕುಗಳಿಗೂ, ಆಸ್ತಿಗಳನ್ನು ಹರಾಜು ಹಾಕುವುದ ಗಲೀ ಮನೆಗಳನ್ನು ಜಪ್ತಿ ಮಾಡುವುದಾಗಲೀ ಮಾಡಬಾರದೆಂದು ಸೂಚನೆಯನ್ನು ಕೊಟ್ಟಿದ್ದೇನೆ. ನನಗೆ ಬಂದಿರುವ ವರದಿಯ ಪ್ರಕಾರ, ಮತ್ತು ಮಾನ್ಯ ಸದಸ್ಯರು ಹೇಳುವ ಪ್ರಕಾರ ರಾಷ್ಟ್ರೀಕೃತ ಬ್ಯಾಂಕು ಗಳಿಂದ ಸಾಲ ಪಡೆದ ರೈತರುಗಳ ಜಮೀನು ಹರಾಜು ಆಗಿರಬೇಕು. ಇದನ್ನೆಲ್ಲಾ ಪರಿಶೀಲನೆ ಮಾಡಿ ರಾಷ್ಟ್ರೀಕೃತ ಬ್ಯಾಂಕುಗಳಿಗೂ, ಸಹ ಯಾವ ಮನೆಯನ್ನೂ ಜಪ್ತಿ ಮಾಡಬಾರದು ಮತ್ತು ಆಸ್ತಿಗಳನ್ನು ಹರಾಜು ಹಾಕಬಾರದೆಂದು ಆದೇಶವನ್ನು ಕಳುಹಿಸಿದ್ದೇವೆ. ನಾನು ಡೆಪ್ಯೂಟಿ ರಿಜಿಸ್ಟ್ರಾರ್‌ಗಳಿಗೂ ಇದರ ಬಗ್ಗೆ ಫೋನ್ ಮಾಡಿ ಹೇಳಿದ್ದೇನೆ. ಯಾವುದಾದರೂ ಸಂದರ್ಭದಲ್ಲಿ ಮನೆಗಳು ಜಪ್ತಿಯಾಗಿ ಜಮೀನುಗಳು ಹರಾಜಾಗಿದ್ದರೆ ಅಂತಹ ವಿಷಯಗಳನ್ನು ನನ್ನ ಗಮನಕ್ಕೆ ತಂದರೆ ಸೂಕ್ತ ಕ್ರಮವನ್ನು ಕೈಗೊಳ್ಳುತ್ತೇನೆ

(೬) ನಾಲ್ಕನೇ ನಂಬರ್ ಹಲ್ಲರ್ ಲೈಸೆನ್ಸ್‌ದಾರರಿಗೆ ಲೆವಿ ವಸೂಲಿಯಿಂದ ವಿನಾಯ್ತಿ ಕೊಡುವ ಬಗ್ಗೆ.

ಶ್ರೀ ಪಸಂತ ವಿ. ಸಾಲಿಯಾನ. (ಕಾಪು).—ಮಾನ್ಯ ಅಧ್ಯಕ್ಷರೇ. ದಕ್ಷಿಣ ಕನ್ನಡ ಜಿಲ್ಲೆಯ ಗ್ರಾಮಾಂತರ ಪ್ರದೇಶದಲ್ಲಿ ೪ನೇ ನಂಬರಿನ ಹಲ್ಲರ್ ಲೈಸೆನ್ಸ್ ಪಡೆದಿರುವವರು ಭತ್ತವನ್ನು ಅಕ್ಕಿ ಮಾಡಿಕೊಡುವ ಬಗ್ಗೆ ೫೦ ಕ್ವಿಂಟಾಲಿನಿಂದ ಹಿಡಿದು ೧೦೦ ಕ್ವಿಂಟಾಲ್‌ವರೆಗೆ ಲೆವಿ ಕೊಡಬೇಕೆಂದು ತಹಶೀಲ್ದಾರ್‌ರವರು ಆದೇಶ ನೀಡಿದ್ದಾರೆ. ಆದರೆ ಇವರುಗಳು ಕಡಿಮೆ ಪ್ರಮಾಣದಲ್ಲಿ ಭತ್ತವನ್ನು ಅಕ್ಕಿ ಮಾಡಿಕೊಡುತ್ತಿರುವುದರಿಂದ ಭತ್ತವನ್ನು ತಂದ ರೈತರುಗಳಿಂದ ಲೆವಿ ವಸೂಲು ಮಾಡಲು ಸಾಧ್ಯವಾಗುವುದಿಲ್ಲ ಅಲ್ಲದೆ ಈ ಜಿಲ್ಲೆಯಲ್ಲಿ ಹಲವಾರು ಮಂದಿ ಅನಧಿಕೃತವಾಗಿ ಹಲ್ಲರುಗಳನ್ನು ಇಟ್ಟುಕೊಂಡಿದ್ದು ಧಾರಾಳವಾಗಿ ಅಕ್ಕಿ ಮಾಡಿಕೊಡುತ್ತಿದ್ದಾರೆ. ಪರಿಸ್ಥಿತಿ ಹೀಗಿರುವಲ್ಲಿ ಲೈಸೆನ್ಸ್ ಪಡೆದುಕೊಂಡು ಹಲ್ಲರ್ ನಡೆಸುತ್ತಿರುವವರಿಗೆ ಅತಿಯಾದ ತೊಂದರೆಯಾಗುತ್ತಿರುವುದರಿಂದ ಈ ಲೆವಿಯಿಂದ ವಿನಾಯ್ತಿ ನೀಡುವಂತೆ ಜಿಲ್ಲಾಧಿಕಾರಿಗಳಿಗೆ ಈಗಾಗಲೇ ಮನವಿ ಮಾಡಿಕೊಂಡಿದ್ದು, ಸರಕಾರದವರು ಅವರ ಮನವಿಯನ್ನು ಪರಿಶೀಲಿಸಿ ಅವರನ್ನು ಲೆವಿಯಿಂದ ವಿನಾಯ್ತಿ ಗೊಳಿಸಬೇಕೆಂದು ಸರಕಾರದವರನ್ನು ಈ ಮೂಲಕ ಒತ್ತಾಯಿಸುತ್ತೇನೆ.

ಶ್ರೀ ಜಿ ಬಸವಣ್ಣಪ್ಪ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು).—ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಲೈಸೆನ್ಸ್ ಪಡೆದ ಹಲ್ಲರ್‌ಗಳು ೧೭೫೩ ಇವೆ. ಇವುಗಳಲ್ಲಿ ಸರಿಯಾದ ಪ್ರಮಾಣದಲ್ಲಿ ಲೆವಿ ಅಕ್ಕಿಯನ್ನು ಸಂಗ್ರಹಣೆ ಮಾಡುತ್ತಿಲ್ಲ. ಹಲ್ಲರ್‌ಗಳು ಅನಧಿಕೃತವಾಗಿ ನಡೆದು ಭತ್ತವನ್ನು ಅಕ್ಕಿಯನ್ನಾಗಿ ಮಾಡುತ್ತಿವೆಯೋ ಅಂತಹ ಹಲ್ಲರ್‌ಗಳ ಮಾಲೀಕರ ಮೇಲೆ ಅಗತ್ಯ ಪಸ್ತುಗಳ ಕಾನೂನು ಉಲ್ಲಂಘನೆ ಕಾಯ್ದೆ ರೀತಿ ಅವರ ಮೇಲೆ ಉಗ್ರ ಕ್ರಮ ಕೈಗೊಳ್ಳುತ್ತೇನೆ.

(೭) ಪಾವಗಡ ತಾಲ್ಲೂಕಿನ ರಂಗ ಸಮುದ್ರ ನಿವಾಸಿ ಶ್ರೀ ನರಸಿಂಹಪ್ಪನವರ ಮೇಲೆ ಮಾಡಿದ ಹಲ್ಲೆ ಬಗ್ಗೆ,

ಶ್ರೀ ಸಿ. ಪಿ. ಮೂಡಲಗಿರಿಯಪ್ಪ (ಶಿರಾ).—ಮಾನ್ಯ ಅಧ್ಯಕ್ಷರೇ. ತುಮಕೂರು ಜಿಲ್ಲೆ ಪಾವಗಡ ತಾಲ್ಲೂಕು ರಂಗಸಮುದ್ರ ಗ್ರಾಮದ ನಿವಾಸಿ ಶ್ರೀ ನರಸಿಂಹಪ್ಪನವರ ಮನೆಗೆ ದಿನಾಂಕ ೧೮-೧-೮೬ ರಂದು ಕೆಲವು ಸುವರ್ಣೀಯವರು ಧಾಳಿ ನಡೆಸಿ ಮನೆಯಲ್ಲಿದ್ದ ಸಾಮಾನು, ದಂಡ್ಯು ಹಾಗೂ ೭೦ ವೇಕೆಗಳನ್ನು ದೋಚಿಕೊಂಡು ಹೋಗಿದ್ದು ಈ ಬಗ್ಗೆ ಪೈ. ಎನ್. ಹೊಸಕೋಟೆ ಪೋಲೀಸ್ ಠಾಣೆಯಲ್ಲಿ ದೂರು ಸಲ್ಲಿಸಿದರೂ ಪೋಲೀಸರು ಯಾವುದೇ ಕ್ರಮ ಕೈಗೊಂಡಿರುವುದಿಲ್ಲ. ಮತ್ತು ದರೋಡೆಗಾರರನ್ನು ಬಂಧಿಸಿರುವುದಿಲ್ಲ. ಮೇಲಾಗಿ ಪರ್ಯಾದಿ ಕೊಟ್ಟವರನೇ ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ ಆದಿ ದ್ರಾವಿಡ ಜಾತಿಗೆ ಸೇರಿರುವ ಬಡ ಬಡ ಅರ್ಜಿದಾರರಿಗೆ ಪೋಲೀಸರು ರಕ್ಷಣೆ ಕೊಡುವ ಬದಲು ಅವರನ್ನೇ ಹೀಯಾಳಿಸಿರುವುದು ಹಾಸ್ಯಾಸ್ಪದ. ಪೋಲೀಸ್ ಅಧಿಕಾರಿಗಳ ಈ ಕರ್ತವ್ಯ ಲೋಪದ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮವನ್ನು ತಿಳಿಯಲಿಚ್ಛಿಸುತ್ತೇನೆ.

ಶ್ರೀ ಬಿ. ರಾಚಯ್ಯ (ಗೃಹ ಸಚಿವರು).—ವಿವರಗಳನ್ನು ತರಿಸಿ ಸದನಕ್ಕೆ ಕೊಡುತ್ತೇನೆ.